ಸಂಸಾರವನ್ನು ಹಾಳುಮಾಡಲು ಅನಂತನ ಅಕ್ಕನ ಮಗ ಗೋಪಾಲನನ್ನೇ ದಾಳವಾಗಿ ಬಳಸಿಕೊಳ್ಳುತ್ತಾನೆ. ಬ್ಯಾಂಕಿನ ಅಟೆಂಡರ್ ಕೆಲಸ ಮಾಡುತ್ತಿದ್ದ ಗೋಪಾಲ, ಸಿದ್ಧಣ್ಣ ಸಾಕಿದ ಪುಂಡರಲ್ಲಿ ಒಬ್ಬನಾಗುತ್ತಾನೆ. ಸಿದ್ಧಣ್ಣನ ಸಲಹೆಯಂತೆ ಅವನು ತಮ್ಮ ಆಸ್ತಿಯನ್ನು ತನ್ನ ಹೆಸರಿಗೆ ಬರೆಸಿಕೊಂಡು ಅನಂತನನ್ನು ಮತ್ತು ಅವನ ಹೆಂಡತಿ ರಾಜೀವಿಯನ್ನು ಮನೆಯಿಂದ ಹೊರಗೆ ಹಾಕುತ್ತಾನೆ. ಕೆಲವೇ ಸಮಯದಲ್ಲಿ ಸಿದ್ಧಣ್ಣ ಉಪಾಯವಾಗಿ ಆಸ್ತಿಯನ್ನು ತನ್ನ ಹೆಸರಿಗೇ ಮಾಡಿಕೊಳ್ಳುತ್ತಾನೆ. ಇದು ಬ್ರಿಟಿಷರು ರಾಜ್ಯಗಳನ್ನು ಕಬಳಿಸಲು ವಿದ್ರೋಹಿಗಳನ್ನು ಬಳಸಿಕೊಂಡದ್ದನ್ನು ಸಾಂಕೇತಿಕವಾಗಿ ಹೇಳುತ್ತದೆ.

ಕಾದಂಬರಿಕಾರರು ಧಾರ್ಮಿಕ ಕ್ಷೇತ್ರದಲ್ಲಿ ನಡೆಯುವ ಶೋಷಣೆಯನ್ನು ಕೂಡಾ ಈ ಕಾದಂಬರಿಯಲ್ಲಿ ತಂದಿದ್ದಾರೆ. ಇದು ವಸಾಹತುಶಾಹಿಗೆ ಸಂಬಂಧಿಸದ ಒಂದು ಆಯಾಮ. ಜ್ಯೋತಿಷ, ದೇವತಾರಾಧನೆ ಮುಂತಾದ ಕ್ಷೇತ್ರಗಳ ಶೋಷಕರ ಪ್ರತಿನಿಧಿಯಾಗಿ ಇಲ್ಲಿ ಶಾಮ ತಂತ್ರಿಗಳಿದ್ದಾರೆ. ಸಿದ್ಧಣ್ಣನು ಈ ಕ್ಷೇತ್ರಕ್ಕೂ ಪ್ರವೇಶಿಸಿ ಲಾಭ ಮಾಡಿಕೊಳ್ಳುತ್ತಾನೆ. ದೇಶೀಯ ಸಮಾಜದಲ್ಲಿ ಬೆಳೆದ ವಂಚನೆಯ ಆಯಾಮಗಳನ್ನು ಕಾದಂಬರಿಕಾರರು ಹೀಗೆ ತೆರೆದಿಟ್ಟಿದ್ದಾರೆ. ಊರಿನ ಜಾರಂದಾಯ ಸಾನವನ್ನು (ಗುಡಿ) ಜೀರ್ಣೋದ್ಧಾರ ಮಾಡಲು ಹೊರಟು, ಅಲ್ಲಿ ಈಶ್ವರ ದೇವರ ದೇವಾಲಯ ಆಗಬೇಕೆಂದು ತನಗೆ ಕನಸಿನಲ್ಲಿ ದೇವರು ಹೇಳಿದರೆಂದು ಸುದ್ದಿ ಹಬ್ಬಿಸಿ, ಅಲ್ಲೊಂದು ಶಿವಾಲಯವನ್ನು ನಿರ್ಮಿಸಿ, ಆ ನೆವನದಲ್ಲಿ ಸಾಕಷ್ಟು ಹಣ ಮಾಡಿಕೊಂಡ ಸಿದ್ಧಣ್ಣ ದೇವಾಲಯದ ಪಕ್ಕದಲ್ಲಿ 'ಸಾಧನಾಶ್ರಮ' ಎನ್ನುವ ಕಟ್ಟಡವನ್ನು ನಿರ್ಮಿಸಿಕೊಂಡು ಅಲ್ಲಿಯೇ ವಾಸಿಸತೊಡಗುತ್ತಾನೆ. ಹೊರಗಿನ ಪ್ರಪಂಚಕ್ಕೆ ತಾನು ಅಲ್ಲಿ ಧ್ಯಾನ, ಉಪಾಸನೆ ಇತ್ಯಾದಿಗಳನ್ನು ಮಾಡುತ್ತಿರುತ್ತೇನೆ ಎಂದು ಪ್ರಚಾರ ಮಾಡಿಸುತ್ತಾನೆ. ವಾಸ್ತವವಾಗಿ ಅವನು ಗೋಪಾಲ ಮತ್ತು ಜಾರಪ್ಪ ಎಂಬ ತನ್ನಿಬ್ಬರು ಸಹಾಯಕರ ಮೂಲಕ ಅಲ್ಲಿ ಮದ್ಯ, ಮಾಂಸಗಳನ್ನು ಗುಟ್ಟಾಗಿ ತರಿಸಿಕೊಂಡು, ರಾತ್ರಿ ಹೊತ್ತು ನರ್ಸ್ ಮತ್ತಿತರ ಹೆಂಗಸರನ್ನು ಕರೆಯಿಸಿಕೊಂಡು ವಿಲಾಸೀ ಜೀವನವನ್ನು ನಡೆಸುತ್ತಿರುತ್ತಾನೆ.



ಸಿದ್ಧಣ್ಣ ತಮ್ಮ ಮನೆಮಾರುಗಳನ್ನು ನುಂಗಿಹಾಕಿದಾಗ ಗೋಪಾಲನಿಗೆ ಬುದ್ಧಿ ಬರುತ್ತದೆ. ಅವನು ಸಿದ್ಧಣ್ಣನಿಗೆ ಬುದ್ಧಿ ಕಲಿಸುವೆನೆಂದು ನಿರ್ಧರಿಸಿ, ಎಂದಿನಂತೆ ಆತ್ಮೀಯತೆ ತೋರಿಸುತ್ತಾ ಅವನ ಬಂಟನಾಗಿ ಸಾಧನಾಶ್ರಮದಲ್ಲಿ ಸೇವೆ ಸಲ್ಲಿಸುತ್ತಿರುತ್ತಾನೆ. ಒಂದು ರಾತ್ರಿ ಜಾರಪ್ಪ ಬೇರೆ ಊರಿಗೆ ಹೋಗಿದ್ದಾಗ ಗೋಪಾಲ ಸಿದ್ಧಣ್ಣ ನಶೆಯಲ್ಲಿರುವಾಗ ಅವನನ್ನು ಉಸಿರುಗಟ್ಟಿಸಿ ಕೊಂದು ಪರಾರಿಯಾಗುತ್ತಾನೆ.

ಆ ಸಂದರ್ಭದಲ್ಲಿ ಅವನ ಮಾವನಾದ ಅನಂತನಿಗೆ ವರ್ಗಾವಣೆಯಾಗಿ ಕಾಸರಗೋಡಿನಲ್ಲಿರುತ್ತಾನೆ. ನೆಲೆ ಕಳೆದುಕೊಂಡ ಅಪ್ಪ, ಅಮ್ಮ, ಅಕ್ಕ ಮತ್ತು ಅವಳ ಸಂಸಾರವನ್ನು ತನ್ನ ಸಂಸಾರದ ಜತೆಗೆ ಸಾಕುತ್ತಿರುತ್ತಾನೆ. ಗೋಪಾಲ ಮಾವನಿಗೆ ತಾನು ಮಾಡಿದ ಅನ್ಯಾಯಗಳ ಪರಿಮಾರ್ಜನೆಯೆಂಬಂತೆ ಹತ್ತು ಸಾವಿರ ರೂಪಾಯಿಗಳನ್ನು ಒಂದು ಕಾಗದದಲ್ಲಿ ಕಟ್ಟಿ ಮಾವನ ಮನೆಯೊಳಗೆ ಎಸೆದು ತಾನು ದೇಶಾಂತರ ಹೋಗುತ್ತಾನೆ.

ಹೀಗೆ ಈ ಕಾದಂಬರಿಯಲ್ಲಿ ಒಂದು ಆಧಿಕಾರಿಕ ವಸ್ತುವು ತಿರುವುಗಳನ್ನು ಪಡೆದುಕೊಂಡು ಮೊದಲಿನಿಂದಕೊನೆಯವರೆಗೆಬೆಳೆಯುವಚಿತ್ರಣವಿರದೆ ಬೇರೆ ಬೇರೆ ಘಟನೆಗಳ (ಎಪಿಸೋಡ್) ಮೂಲಕ ಸಿದ್ಧಣ್ಣನ ಶೋಷಕ ವ್ಯಕ್ತಿತ್ವವನ್ನು ಕಟ್ಟಿಕೊಡಲಾಗಿದೆ. ಸಿದ್ಧಣ್ಣನ ಚರಿತ್ರೆಯೇ ಕಾದಂಬರಿಯನ್ನು ಮುನ್ನಡೆಸುವ ಸೂತ್ರವಾದುದರಿಂದ ಕಾದಂಬರಿಯ ಈ ಎಪಿಸೋಡಿಕ್ ತಂತ್ರಗಾರಿಕೆ ಕಾದಂಬರಿಯನ್ನು ಗೆಲ್ಲಿಸಿದೆ.

ಸಾತ್ವಿಕ ವ್ಯಕ್ತಿಗಳೇ ಕಾದಂಬರಿಯ ನಾಯಕರಾಗಬೇಕು ಎನ್ನುವ ಚಿಂತನೆಯಂತೆ ಅನಂತನೇ ಕಾದಂಬರಿಯ ನಾಯಕನಾಗಬೇಕಾಗಿತ್ತು. ಆದರೆ ಎಪಿಸೋಡಿಕ್ ಮಾದರಿಯಲ್ಲಿ ಸಿದ್ಧಣ್ಣನ ಕ್ರೌರ್ಯ, ಕಾಮದಾಟಗಳು, ಪರರ ಆಸ್ತಿಯನ್ನು